**ದಿನಾಂಕಃ 07/12/2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದೂವರೆದ ಮುಖ್ಯ ವಿಚಾರಣೆ ವಾದಿಗಳ ಪರ ಶ್ರೀ ವೈ ಹೆಚ್ ಕೆ ವಕೀಲರಿಂದಃ**

ನನ್ನ ಗಂಡನ ಹೆಸರಿನಲ್ಲಿರುವ 1 ಕ್ರಯ ಪತ್ರ ಕೊಟ್ಟಿದ್ದೇನೆ ಅದನ್ನು ನಿಪಿ 31 ಎಂದು ಗುರುತಿಸಲಾಯಿತು.

1 ಪ್ರಮಾಣ ಪತ್ರ ಕೊಟ್ಟಿದ್ದೇನೆ ನಿಪಿ 32 ಎಂದು ಗುರುತಿಸಲಾಯಿತು.

1 ಮನೆ ಬಾಡಿಗೆ ಪತ್ರ ಕೊಟ್ಟಿದ್ದೇನೆ ಅದನ್ನು ತಕರಾರಿಗೆ ಒಳಪಟ್ಟು ನಿಪಿ 33 ಎಂದು ಗುರುತಿಸಲಾಯಿತು.

ಒ ಎಸ 79/2012 ರಲ್ಲಿನ ಆರ್ಡರ ಶೀಟಿನ ಪ್ರತಿಯನ್ನು ನಿಪಿ 34 ಎಂದು,

ಬೇರೆ ಬೇರೆ ಇಲಾಖೆಯವರಿಗೆ ನಾನು ಕಳುಹಿಸಿದ ಅರ್ಜಿ ಬಗ್ಗೆ 7 ಅಂಚೆ ಸ್ವೀಕೃತಿ ಪತ್ರಗಳನ್ನು ಕೊಟ್ಟಿದ್ದೇನೆ ಅವುಗಳನ್ನು ಒಟ್ಟಿಗೆ ನಿಪಿ 35 ಎಂದು ಗುರುತಿಸಲಾಯಿತು.

ಹೆಸ್ಕಾಂನವರು ನನಗೆ ಕಳುಹಿಸಿದ 1 ಪೊಸ್ಟಲ್ ಕವರನ್ನು ನಿಪಿ 36 ಎಂದು ಗುರುತಿಸಲಾಯಿತು.

ದಾವಾ ಆಸ್ತಿಯ 13 ಪೋಟೋಗಳನ್ನು ಕೊಟ್ಟಿದ್ದು ಅವುಗಳನ್ನು ಒಟ್ಟಿಗೆ ನಿಪಿ 37 ಎಂದು ಗುರುತಿಸಲಾಯಿತು.

ದಾವೆಯಲ್ಲಿ ಕೇಳಿದಂತೆ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳುತ್ತೇನೆ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಕೆ ಜಿ ಎಫ್ ವಕೀಲರಿಂದಃ**

ದಾವೆ ಹಾಕಲು ಮತ್ತು ನನ್ನ ಮುಖ್ಯ ವಿಚಾರಣೆ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ನಾನೇ ಸ್ವತಃ ಹೋಗಿ ತೆಗೆದುಕೊಂಡು ಬಂದಿದ್ದೇನೆ. ವಿ ಪಿ ಸಿ ನಂ 218 ಇದು ನಮ್ಮ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವೆ ಮಾಡಿವ ಪೂರ್ವದಲ್ಲಿ ನಮ್ಮ ಕುಟುಂಬಕ್ಕೆ ಏನು ಆಸ್ತಿಗಳು ಇವೆ ಎಂದು ನಾನು ತಿಳಿದುಕೊಂಡಿದ್ದೇನೆ ನಮ್ಮ ಕುಟುಂಬಕ್ಕೆ 4 ಸೈಟುಗಳು, 2 ಜಮೀನುಗಳು ಇರುತ್ತವೆ. ಸೈಟುಗಳ ನಂಬರ ಹೇಳಲು ಬರುವುದಿಲ್ಲ. ಜಮೀನುಗಳ ಸರ್ವೆ ನಂ ಹೇಳುತ್ತೇನೆ. ದಾವೆ ಮಾಡುವ ಪೂರ್ವದಲ್ಲಿ ನಮ್ಮ ಕುಟುಂಬದ ಆಸ್ತಿಗಳ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಮ್ಮ ತಂದೆಗೆ ನಾವು 4 ಜನ ಹೆಣ್ಣು ಮಕ್ಕಳು ಮತ್ತು 3 ಜನ ಗಂಡು

ಮಕ್ಕಳು ಎಂದರೆ ಸರಿ. ನಮ್ಮ ಸಹೋದರ ಸಹೋದರಿಯರ ಪೈಕಿ ಜಬೀವುಲ್ಲಾ ದೊಡ್ಡವನು ಎಂದರೆ ಸರಿ ನಂತರ 2 ನೇ ಪ್ರತಿವಾದಿ ಹುಟ್ಟಿರುತ್ತಾನೆ. ನಮ್ಮ ತಂದೆ ಜೀವಂತವಿರುವಾಗ ದಾವಾ ಆಸ್ತಿಗಳನ್ನು ಅವರೇ ನೋಡಿಕೊಂಡು ಹೋಗುತ್ತಿದ್ದರು. ಅವರು ಜೀವಂತ ಇದ್ದಾಗ ದಾವಾ ಆಸ್ತಿಗಳಲ್ಲಿ ಮಕ್ಕಳಿಗೆ ಬಾಗವಾಗಿರಲಿಲ್ಲ ಎಂದರೆ ಸರಿ. ನನ್ನ ತಂದೆ 1976 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ತಂದೆ ತೀರಿಕೊಂಡ ನಂತರ ಮನೆತನದ ಹಿರಿತನವನ್ನು ನಮ್ಮ ತಾಯಿ ಮತ್ತು ನಮ್ಮ ಅಣ್ಣ ಜಬೀವುಲ್ಲಾ ನೋಡಿಕೊಂಡು ಹೋಗುತ್ತಿದ್ದರು. ನಮ್ಮ ತಂದೆ ಜೀವಂತ ಇದ್ದಾಗ 2 ನೇ ಪ್ರತಿವಾದಿಯ ಮದುವೆ ಆಗಿತ್ತು ಉಳಿದವರ ಮದುವೆ ಆಗಿರಲಿಲ್ಲ. ನಮ್ಮ ಕುಟುಂಬಕ್ಕೆ 3 ಮನೆಗಳಿರುತ್ತವೆ, ಅವುಗಳ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ. ನಮ್ಮ ಕುಟುಂಬಕ್ಕೆ 2 ಕೆಂಪು ಹಂಚಿನ ಮನೆ ಮತ್ತು 1 ಆರ್.ಸಿ.ಸಿ ಮನೆ ಇರುತ್ತದೆ. 1 ಮನೆಯಲ್ಲಿ ನಾನು ಮತ್ತು ಇನ್ನೊಂದು ಮನೆಯಲ್ಲಿ ನನ್ನ ತಮ್ಮ ಶೌಕತ್ ಅಲಿ ಮತ್ತು ಆರ್ ಸಿ ಸಿ ಮನೆಯಲ್ಲಿ 1 ನೇ ಪ್ರತಿವಾದಿ ವಾಸವಾಗಿರುತ್ತಾನೆ. ನನ್ನ ತಂದೆ ಜೀವಂತ ಇದ್ದಾಗ ನಾನು ಅವರು ನೋಡಿಕೊಳ್ಳುತ್ತಿದ್ದೇನು ಅದಕ್ಕಾಗಿ ನಾನು ಆ ಮನೆಯಲ್ಲಿ ಇದ್ದೇನು. 1985 ರಲ್ಲಿ ನಾವು ಎಲ್ಲರೂ ಸೇರಿ ಆಸ್ತಿಯಲ್ಲಿ ಅಪಸಾತ್ ಹಂಚಿಕೆ ಮಾಡಿಕೊಂಡು ಆ ಬಗ್ಗೆ ಕೂಡಿಯಾಲ್ ಹೊಸಪೇಟೆ ಪಂಚಾಯಿತಿಗೆ ಅರ್ಜಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ 4 ಸೈಟುಗಳು ಇದ್ದ ಬಗ್ಗೆ ನಾನು ದಾಖಲೆಗಳನ್ನು ಕೊಟ್ಟಿದ್ದೇನೆ ಅವುಗಳ ವಿಸ್ತೀರ್ಣ ಗೊತ್ತಿಲ್ಲ. ಅವುಗಳ ಪೈಕೆ 1 ಆಸ್ತಿ ಈಗಲೂ ನನ್ನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನನ್ನ ಅಣ್ಣತಮ್ಮಂದಿರು ನನಗೆ ಕೊಡಬೇಕಾದ ಆಸ್ತಿಯನ್ನು ಖರೀದಿ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ ಆ ಆಸ್ತಿಯನ್ನು ನನ್ನ ಗಂಡ ಹಣ ಕೊಟ್ಟು ಖರೀದಿ ಮಾಡಿದ್ದಾರೆ. ಈಗ ನಾನು ಕರಿಹಂಚಿನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಕರಿಹಂಚಿನ ಮನೆಯಲ್ಲಿ ನಾನು, ನನ್ನ ತಾಯಿ, ನನ್ನ ಹಿರಿಯ ಮಗಳು ಆಕೆ ಗಂಡ ವಾಸವಾಗಿದ್ದೇವು ಎಂದರೆ ಸರಿಯಲ್ಲ. ನನ್ನ ತಾಯಿ ಬೇರೆ ಮನೆಯಲ್ಲಿ ವಾಸವಾಗಿದ್ದಳು. 1986 ರಲ್ಲಿ ಹಂಚಿಕೆ ಆದ ನಂತರ ನಮ್ಮ ನಮ್ಮ ಬಾಗಕ್ಕೆ ಬಂದ ಆಸ್ತಿಗಳಲ್ಲಿ ನಾವು ಕಬ್ಜಾ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ವಾಸವಾಗಿರುವ ಮನೆ 86 ರ ವಾಟ್ನಿಯಲ್ಲಿ ನನ್ನ ತಮ್ಮ ಕಲೀಲನಿಗೆ ಬಂದಿತ್ತು ಎಂದರೆ ಸರಿಯಲ್ಲ. ನಾನು ವಾಸವಿರುವ ಕರಿ ಹಂಚಿನ ಮನೆಯನ್ನು ನನ್ನ ತಮ್ಮ ನನಗೆ ಭಕ್ಷಿಸ್

ಮೂಲಕ ಕೊಟ್ಟಿದ್ದಾನೆ ಅದನ್ನು ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿ ಎಂದು ನಾನು ಕೊಡಿಯಾಲ ಹೊಸಪೇಟೆ ಪಂಚಾಯಿತಿಗೆ ಅರ್ಜಿ ಕೊಟ್ಟಿದ್ದೆನು ಎಂದರೆ ಸರಿಯಲ್ಲ. ನನ್ನ ತಮ್ಮ ಸಹಿ ಮಾಡಿಸಿಕೊಂಡ ತೆಗೆದುಕೊಂಡು ಹೋಗಿ ಕೊಟ್ಟಿದ್ದಾನೆ. ನನ್ನ ತಮ್ಮ ನನ್ನ ವ್ಯವಹಾರಕ್ಕೆ ಕೊಡು ನನ್ನ ಮನೆಯನ್ನು ನಿನಗೆ ಬಕ್ಷಿಸ್ ಮಾಡಿಕೊಡುತ್ತೇನೆ ಎಂದು ಹೇಳಿದ್ದನು, ಅದಕ್ಕೆ ನಾನು ಅವನಿಗೆ ಹಣ ಕೊಟ್ಟಿದ್ದೇನು, ಎಷ್ಟು ಹಣ ಎಂದು ನೆನಪಿಲ್ಲ. ಹಣ ಕೊಟ್ಟಿದ್ದಕ್ಕೆ ನನ್ನ ತಮ್ಮ ಮತ್ತು ಆತನ ಹೆಂಡತಿ ದಾಖಲೆ ಬರೆದುಕೊಟ್ಟಿದ್ದಾರೆ ಅದನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನಾನು ಕೊಡಿಯಾಲ ಹೊಸಪೇಟೆಗೆ ಅರ್ಜಿ ಕೊಟ್ಟಾಗ ನನ್ನ ತಮ್ಮ ಆ ಭಕ್ಷಿಸ್ ಪತ್ರ ಖೊಟ್ಟಿ ಇದೆ ಎಂದು ಪಂಚಾಯಿತಿಗೆ ತಕರಾರು ಕೊಟ್ಟಿದ್ದನು ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯವರು ನನ್ನ ಹೆಸರು ಹಚ್ಚಲು ತಕರಾರು ಮಾಡಿದ್ದರಿಂದ ನಾನು ಮಾಕನೂರು ಮಂಡಳ ಪಂಚಾಯಿತಿಗೆ ಅರ್ಜಿ ಕೊಟ್ಟಿದ್ದೇನು ಎಂದರೆ ಸರಿಯಲ್ಲ. ಆ ಅರ್ಜಿ ವಜಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ವಾಸವಿರುವ ಮನೆ ನನಗೆ ಸೇರಬೇಕು ಎಂದು 5 ನೇ ಪ್ರತಿವಾದಿಯು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂ 79/12 ಎನ್ನುವ ದಾವೆ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ನಾನು ನಮ್ಮ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದೇನು ಎಂದರೆ ಗೊತ್ತಿಲ್ಲ. ಆ ಪ್ರತಿವಾದ ಪತ್ರದಲ್ಲಿ ನಾನು ನನ್ನ ಅಣ್ಣ ತಮ್ಮಂದಿರು 86 ರಲ್ಲಿ ನನಗೆ ಗೊತ್ತಿಲ್ಲದಂತೆ ವಾಟ್ನಿ ಮಾಡಿಕೊಂಡಿದ್ದಾರೆ ಎಂದು ಬರೆಸಿದ್ದೆನು ಎಂದರೆ ಗೊತ್ತಿಲ್ಲ. ಆ ರೀತಿ ಅವರು ಹುಟ್ಟಿಸಿಕೊಂಡಿರುತ್ತಾರೆ. ನಮ್ಮ ತಂದೆ ತಂಗಿ ಜೈತುನುಬಿ ಚಮನ್ ಸಾಬ್ ಐರಣಿ ಇವರಿಗೆ ನನ್ನ ಅಣ್ಣ ವಿಪಿಸಿ ನಂ 218 ಇದನ್ನು ಖರೀದಿ ಮೂಲಕ ಕೊಟ್ಟಿದ್ದಾನೆ ಎಂದರೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮತ್ತು ನನ್ನ ಅಣ್ಣ ಸೇರಿ ಕುಟುಂಬದ ಕೆಲವು ಆಸ್ತಿಗಳನ್ನು ಮಾರಿ ಉಳಿದವರ ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿ 2013 ರಲ್ಲಿ ತೀರಿಕೊಂಡಿದ್ದರು ಎಂದರೆ ಸರಿ. ನನ್ನ ಗಂಡ ಕಟ್ಟಿಸಿದ ಮನೆಯಲ್ಲಿ ನಾನು ವಾಸವಾಗಿರುವುದಿಲ್ಲ, ಅದರಲ್ಲಿ ನನ್ನ ಮಕ್ಕಳು ಮತ್ತು ಮೊಮ್ಮಕ್ಕಳು ಇರುತ್ತಾರೆ. ಈಗ 5-6 ವರ್ಷಗಳ ಹಿಂದೆ ಕಲೀಲ ಇತನು ಮನೆ ಖಾಲಿ ಮಾಡಿಕೊಡಿ ಎಂದು ನನಗೆ ಮತ್ತು ನನ್ನ ಹಿರಿಯ ಮಗಳು ಅಳಿಯನಿಗೆ ಒತ್ತಾಯಿಸಿದ್ದನು ಎಂದರೆ ಸರಿಯಲ್ಲ. ನನ್ನ ಎಲ್ಲ ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರು ನನ್ನನ್ನು ಮನೆ ಬಿಡು ಎಂದು ಹೇಳಿದ್ದಕ್ಕೆ ನಾನು

ಅವರ ಮೇಲಿನ ದ್ವೇಷದಿಂದ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ಸದಸ್ಯರಿಗೆ ವಾಟ್ನಿ ಪ್ರಕಾರ ಖಾತೆ ಬದಲಾವಣೆ ಆದ ಬಗ್ಗೆ ದಾಖಲೆ ತೆಗಿಸಿ ನೋಡಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ನಾನು 1 ಸುಳ್ಳು ದಾವೆ ಸಲ್ಲಿಸಿ ಅದಕ್ಕೆ ಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ರೆವಿನ್ಯೂ ಎಂಟ್ರಿಗಳನ್ನು ರದ್ದು ಪಡಿಸಲು ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಕಲೀಲ ಇತನು ನನಗೆ ಯಾವುದೇ ಭಕ್ಷಿಸ್ ಪತ್ರ ಬರೆದುಕೊಟ್ಟಿಲ್ಲ, ಆ ಕಾರಣಕ್ಕೆ ಅದನ್ನು ನಾನು ಹಾಜರು ಪಡಿಸಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಪ್ರತಿವಾದಿ 5 ,10 ಮತ್ತು 11 ರವರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಜೆ.ವಿ.ಕುಲಕರ್ಣಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.